ದಿಃ 17.02.2020. ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.

ಪಾಟೀ ಸವಾಲುಃ ಅರ್ಜಿದಾರರ ಪರ ಶ್ರೀ ಬಿ ಆರ್ ಪಿ ವಕೀಲರಿಂದ ,

4. ನಾನು 7 ನೇ ತರಗತಿಯವರೆಗೆ ಓದಿರುತ್ತೇನೆ. ಸಿದ್ದಮ್ಮನ ವಿಲ್ ನಾಮೆ ಬಿಟ್ಟು ಬೇರೆ ವಿಲ್ ನಾಮೆಗೆ ಅದಕ್ಕಿಂತ ಮೊದಲು ಸಾಕ್ಷಿದಾರ ಎಂದು ಸಹಿ ಹಾಕಿಲ್ಲ. ಮತ್ತಿ ಗ್ರಾಮದಿಂದ ಚೆನ್ನಗಿರಿ 18 ಕಿ.ಮಿ ದೂರದಲ್ಲಿದೆ. ನಮ್ಮ ಗ್ರಾಮದಿಂದ ದಾವಣಗೆರೆ 22 ಕಿ.ಮಿ ದೂರ ಇದೆ. ಮತ್ತಿ ಗ್ರಾಮ ಚೆನ್ನಗಿರಿಯಿಂದ 30 ಕಿ. ಮಿ ದೂಾರದಲ್ಲಿದೆ ಎಂದರೆ ಸರಿಯಲ್ಲ. ವಿಲ್ ನಾಮೆಗೆ ಸಹಿ ಹಾಕುವ ಮೊದಲು ಸಿದ್ದಮ್ಮನವರನ್ನು ನೋಡಿದ್ದೆ. ಅವರನ್ನು ಬಹಳ ಸಲ ನೋಡಿದ್ದೇನೆ. ಎಷ್ಟು ಸಲ ಎಂದು ಹೇಳಲಾಗುವುದಿಲ್ಲ. ಸಿದ್ದಮ್ಮನವರಿಗೆ ಸೇರಿದ ಆಸ್ತಿಗಳು ಮತ್ತಿ ಗ್ರಾಮದಲ್ಲಿಲ್ಲ ಎಂದರೆ ಸರಿ . ಸಿದ್ದಮ್ಮನವರು ಮತ್ತಿ ಗ್ರಾಮಕ್ಕೆ 7 ನೆ ಎದುರುದಾರರೊಂದಿಗೆ ಬರುತ್ತಿದ್ದಾಗ ಅವರನ್ನು ನೋಡಿರುತ್ತೇನೆ.

5. ಆರ್ ಡಬ್ಲ್ಯೂ - 5 ಭೀಮಪ್ಪ ನಮ್ಮ ಗ್ರಾಮದವರು ಇರುತ್ತಾರೆ. ಮತ್ತಿ ಗ್ರಾಮದ ಉದಯಪ್ಪನವರು ಗೊತ್ತು. ಅದೇ ರೀತಿ ಮಹದೇವಪ್ಪ ಕೂಡಾ ಗೊತ್ತು. ಉದಯಪ್ಪನವರು ಈಗ ತೀರಿಕೊಂಡಿರುತ್ತಾರೆ. ಉದಯಪ್ಪ ಮತ್ತು ಭೀಮಪ್ಪ ಇವರು 7 ನೇ ಎದುರುದಾರರ ಗಂಡನಾದ ಜಗದೀಶ ಇವರಿಗೆ ಸಹೋದರರಾಗುತ್ತಾರೆ. ನಾನು ಜಗದೀಶ ಇವರಿಗೆ ಸಂಬಂಧಿಕನಲ್ಲ. ಮತ್ತಿ ಗ್ರಾಮದಲ್ಲಿ ನನ್ನ ಹೆಸರಿಗೆ ಜಮೀನು ಇಲ್ಲ. ಮತ್ತಿ ಗ್ರಾಮದಲ್ಲಿ ಜಗದೀಶ ಇವರಿಗೆ ಇರುವ ಜಮೀನದ ಸರ್ವೆ ನಂಬರ್ ಮತ್ತು ವಿಸ್ತೀರ್ಣ ಹೇಳಲಾಗುವುದಿಲ್ಲ. 18-20 ವರ್ಷಗಳಿಂದ ಜಗದೀಶರೊಂದಿಗೆ ಮತ್ತು ಅವರ ಸಹೋದರರಾದ ಮತ್ತು ಉದಯಪ್ಪ ಮತ್ತು ಭೀಮಪ್ಪನೊಂದಿಗೆ ನನ್ನ ಒಡನಾಟ ಇದೆ. ನನ್ನ ಮತ್ತು ಜಗದೀಶ ಹಾಗೂ ಅವರ ಸಹೋದರರೊಂದಿಗೆ ಹಣದ ವ್ಯವಹಾರ ಇಲ್ಲ. ಮತ್ತಿ ಗ್ರಾಮದಲ್ಲಿ ಹೆಚ್ಚಿನ ಜಮೀನು ಖುಷ್ಕಿ ಜಮೀನು ಇದ್ದು ಮಳೆ ಆಧಾರಿತ ವ್ಯವಸಾಯ ಎಂದರೆ ಸರಿಯಲ್ಲ. ನಮ್ಮ ಗ್ರಾಮಕ್ಕೆ ಭದ್ರಾ ಡ್ಯಾಂ ನಿಂದ ನೀರು ಬರುತ್ತದೆ. ಭದ್ರಾವತಿಯಿಂದ ಮತ್ತಿ ಗ್ರಾಮ 60 ಕಿ. ಮಿ ದೂರದಲ್ಲಿದೆ. ಕಾಲುವೆ

ಕೆಳಗಡೆ ಇರುವ ಜಮೀನಿಗೆ ಮಾತ್ರ ನೀರು ಸರಬರಾಜು ಇದ್ದು ಕಾಲುವೆ ಮೇಲ್ಗಡೆ ಜಮೀನು ಒಣ ಬೇಸಾಯದ ಜಮೀನುಗಳು ಎಂದರೆ ಸರಿ . ಮತ್ತಿ ಗ್ರಾಮದಲ್ಲಿ ರೈತರ ಆರ್ಥಿಕ ಸ್ಥಿತಿ ಅಷ್ಟೊಂದು ಚೆನ್ನಾಗಿಲ್ಲ ಎಂದರೆ ಸರಿಯಲ್ಲ. ಆರ್ಥಿಕವಾಗಿ ಚೆನ್ನಾಗಿಲ್ಲದ ರೈತರು ಆರ್ಥಿಕವಾಗಿ ಸುಸ್ಥಿತಿಯಲ್ಲಿರುವ ರೈತರಿಂದ ಹಣ ಹಾಗೂ ಔಷಧಿ ಗೊಬ್ಬರಗಳನ್ನು ಪಡೆಯುತ್ತಾರೆಂದರೆ ಸರಿ . ನಾನು ಕೂಡಾ ಜಗದೀಶ ಇವರ ಬಳಿ ಜಮೀನಿಗೆ ಬೇಕಾಗುವ ಔಷಧಿ , ಗೊಬ್ಬರ ಹಾಗೂ ಹಣ ಪಡೆಯುತ್ತಿದ್ದೆ ಎಂದರೆ ಸರಿಯಲ್ಲ. ಸಿದ್ದಮ್ಮ ತೀರಿಕೊಳ್ಳುವ ಮುಂಚೆ ವಿಲ್ ನಾಮೆ ಮಾಡುವ ಸಮಯದಲ್ಲಿ ಅವರನ್ನು ನೋಡಿದ್ದೆ. ವಿಲ್ ನಾಮೆಗೆ ಸಹಿ ಹಾಕಲು ನನಗೆ ಭೀಮಪ್ಪ ತಿಳಿಸಿದ್ದರು. ವಿಲ್ ನಾಮೆಗೆ ಸಹಿ ಹಾಕುವ 20 ದಿನಗಳ ಮೊದಲು ಭೀಮಪ್ಪ ಈ ಕುರಿತು ತಿಳಿಸಿದ್ದರು. ಭೀಮಪ್ಪ ಇವರು ನನಗೆ ವಿಲ್ ನಾಮೆಗೆ ಸಹಿ ಹಾಕಲು ದಾವಣಗೆರೆಗೆ ಬರುವಂತೆ ಕರೆದಿದ್ದರು. ಭೀಮಪ್ಪ ಈ ರೀತಿ ಕರೆದಾಗ ನಾನು ಸಾಕ್ಷಿದಾರನಾಗಿ ಸಹಿ ಹಾಕಲು ಒಪ್ಪಿಕೊಂಡೆನು. ನಾನು ಮತ್ತು ಭೀಮಪ್ಪ ಜೊತೆಯಾಗಿ ದಾವಣಗೆರೆಗೆ ಹೋಗಿದ್ದೆವು. ದಾವಣಗೆರೆಯಲ್ಲಿ ಸಿದ್ದಮ್ಮನವರು ಸ್ವಾಮಿ ವಿವೇಕಾನಂದ ಬಡಾವಣೆಯಲ್ಲಿ ವಾಸವಿದ್ದರು. ನಾವು ಸಿದ್ದಮ್ಮನವರ ಮನೆಗೆ ಹೋದಾಗ ಸಾಯಂಕಾಲ 5.40 ರಿಂದ 6.00 ಗಂಟೆ ಆಗಿದ್ದಿರಬಹುದು. ನಾವು ಹೋದಾಗ ಸಿದ್ದಮ್ಮನವರು ಹಾಸಿಗೆಯಲ್ಲಿ ಮಲಗಿದ್ದರು ಎಂದರೆ ಸರಿಯಲ್ಲ. ಸಿದ್ದಮ್ಮನವರ ಜೊತೆಗೆ ವೀಲ್ ಚೇರ್ ಇತ್ತು ಎಂದರೆ ಸರಿ. ನಾವು ಅಲ್ಲಿ ಹೋದಾಗ ಸಿದ್ದಮ್ಮನವರೊಂದಿಗೆ ಉಪನೊಂದಣಾಧಿಕಾರಿಗಳು ಮತ್ತು ಅವರ ಸಿಬ್ಬಂದಿ ಇದ್ದರು. ಅಲ್ಲಿ 7 ನೇ ಎದುರುದಾರರು ಮತ್ತು ಆಕೆಯ ಗಂಡ ಜಗದೀಶ ಇದ್ದರು ಎಂದರೆ ಸರಿಯಲ್ಲ. ನಾನು 7 ನೇ ಎದುರುದಾರರು ಮತ್ತು ಜಗದೀಶ ಇವರ ಬಗ್ಗೆ ತಿಳಿದುಕೊಳ್ಳಲು ಪ್ರಯತ್ನಿಸಲಿಲ್ಲ. ನಾನು ಅಲ್ಲಿಗೆ ಹೋದಾಗ ಸಿದ್ದಮ್ಮನವರಿಗೆ ಸೊಂಟ ಮುರಿದ ಬಗ್ಗೆ ಮಾಹಿತಿ ಇತ್ತು ಎಂದರೆ ಸರಿ . ಅವರು ಓಡಾಡುವ ಸ್ಥಿತಿಯಲ್ಲಿ ಇರಲಿಲ್ಲ ಎಂದರೆ ಸರಿಯಲ್ಲ. ಸಬ್ ರಿಜಿಸ್ಟರ್ ಸಿದ್ದಮ್ಮನವರ ಮನೆಗೆ ಏಕೆ ಬಂದಿದ್ದಾರೆಂದು ನಾನು ತಿಳಿದುಕೊಂಡಿದ್ದೇನೆ. ಸಿದ್ದಮ್ಮನವರಿಗೆ ಓಡಾಡಲು ಆಗದೇಇದ್ದ ಕಾರಣಕ್ಕೆ ಬಂದಿದ್ದಾರೆಂದು ತಿಳಿಯಿತು. ಸಿದ್ದಮ್ಮನವರನ್ನು ಗಾಲಿ ಕುರ್ಚಿ

ಮೇಲೆ ಕುಳ್ಳಿರಿಸಿ ಬೇರೆಯವರು ಕರೆದುಕೊಂಡು ಹೋಗಬೇಕಾಗಿತ್ತು ಎಂದರೆ ಸಾಕ್ಷಿಯು ಅವರು ಕೋಲು ಹಿಡಿದು ಓಡಾಡುತ್ತಿದ್ದರು ಎಂದು ಹೇಳುತ್ತಾರೆ. ಸಿದ್ದಮ್ಮನವರನ್ನು ನೋಡಿಕೊಳ್ಳಲು ಒಬ್ಬ ಆಯಾರವರನ್ನು ನೇಮಿಸಿದ್ದರು ಎಂದರೆ ಸರಿಯಲ್ಲ. ಸಿದ್ದಮ್ಮನವರು ತಮ್ಮ ದೈನಂದಿನ ಕ್ರಿಯೆಗಳನ್ನು ಹಾಸಿಗೆಯಲ್ಲಿಯೇ ಮಾಡುತ್ತಿದ್ದರು ಎಂದರೆ ಸರಿಯಲ್ಲ.

6. ನಾನು ಹೋದಾಗ 2 ಲೈನ್ ಮಾತ್ರ ಬರೆಯಲಾಗಿತ್ತು. ವಿಲ್ ನಾಮೆ ಬರೆಯಲು ಸಿದ್ದಮ್ಮನವರು ಮಾಹಿತಿ ಕೊಡುತ್ತಿದ್ದರು. ಸಿದ್ದಮ್ಮನವರು ವಿಲ್ ನಾಮೆ ಬರೆಯಲು ಯಾವ ದಾಖಲೆಗಳನ್ನು ಒದಗಿಸಿದ್ದರು ಎಂದು ಮಾಹಿತಿ ಇಲ್ಲ. ನಾನು ಹೋಗುವಷ್ಟರಲ್ಲಿ ವಿಲ್ ನಾಮೆಯಲ್ಲಿ ಯಾರಿಗೆ ಎಷ್ಟು ಆಸ್ತಿ ಕೊಡಬೇಕು ಎನ್ನುವ ಬಗ್ಗೆ ಮಾಹಿತಿ ನೀಡಲಾಗಿತ್ತು ಎಂದರೆ ಸರಿಯಲ್ಲ. ವಿಲ್ ನಾಮೆಯನ್ನು ಟೈಪ್ ಮಾಡಲಾಗುತ್ತಿತ್ತು. ಅಲ್ಲಿ ರಂಗಪ್ಪ ಎನ್ನುವ ಪತ್ರ ಬರಹಗಾರರು ಇದ್ದರು. ಸದರಿ ಪತ್ರ ಬರಹಗಾರರು ನನಗೆ ಮೊದಲಿನಿಂದ ಪರಿಚಯಸ್ದರಲ್ಲ. ಪತ್ರ ಬರಹರಾರರ ಕುರಿತು ಆ ದಿನ ನನಗೆ ದೊರೆತ ಮಾಹಿತಿ ಮೇಲೆ ಇಂದು ಸಾಕ್ಷಿ ಹೇಳುತ್ತಿದ್ದೇನೆ.

ಈ ಹಂತದಲ್ಲಿ ಮುಂದಿನ ಪಾಟಿ ಸವಾಲಿಗೆ ಮುಂದೂಡಲಾಯಿತು.

*(*ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ *17.02.2020* ರಂದು ಬೆರಳಚ್ಚು ಮಾಡಲಾಯಿತು*)*

***ಓದಿ ಹೇಳಿ ಕೇಳಿ ಸರಿ ಇದೆ ಎಂದು ಒಪ್ಪಿರುತ್ತಾರೆ.***

***ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು-ಎಎಂಎಸಿಟಿ-11,***
***ಭದ್ರಾವತಿ.***